**ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ರವರ ನಿಯಮ -72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:**

**ಸೂಚನೆ :**

ಕರಾವಳಿ ಜಿಲ್ಲೆಗಳಲ್ಲಿ ಪೊಲೀಸ್ ಕಾನ್ಸ್ಟೇಬಲ್‌ಗಳ ಅವೈಜ್ಞಾನಿಕ ಅಂತರ್ ಜಿಲ್ಲಾ ವರ್ಗಾವಣೆ ಆದೇಶ ದಿನಾಂಕ 17-01-2026ರ ಆದೇಶದನ್ವಯ, ರಾಜ್ಯಾದ್ಯಂತ 355 ಪೊಲೀಸ್ ಕಾನ್ಸ್ಟೇಬಲ್‌ಗಳನ್ನು ಅಂತರ್ ಜಿಲ್ಲಾ ವರ್ಗಾವಣೆ ಮಾಡಲಾಗಿದೆ ಇದರಲ್ಲಿ ಕರಾವಳಿ ಭಾಗದ (ದಕ್ಷಿಣ ಕನ್ನಡ, ಉಡುಪಿ) ಠಾಣೆಗಳಲ್ಲಿ 10 ವರ್ಷಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿ, ಇಲ್ಲಿನ ಭಾಷೆ ಮತ್ತು ಭೌಗೋಳಿಕ ಅರಿವು ಹೊಂದಿದ್ದ ಅನುಭವಿ ಸಿಬ್ಬಂದಿಗಳನ್ನು ಏಕಾಏಕಿ ವರ್ಗಾಯಿಸಲಾಗಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ/93/ಪಿಪಿಎಸ್/2022 ಪ್ರಕಾರ, ಯಾವುದೇ ಘಟಕದಿಂದ ಶೇ.15 ಕ್ಕಿಂತ ಹೆಚ್ಚು ಸಿಬ್ಬಂದಿ ವರ್ಗಾವಣೆಯಾಗಿ ಹುದ್ದೆ ಖಾಲಿಯಾಗುವಂತಿಲ್ಲ. ಆದರೆ, ಮಂಗಳೂರು ನಗರ ಪೊಲೀಸ್ ಆಯುಕ್ತರ ವರದಿಯಂತೆ, ಪ್ರಸ್ತುತ ವರ್ಗಾವಣೆಯಿಂದಾಗಿ ರಿಕ್ತ ಸ್ಥಾನಗಳ ಪ್ರಮಾಣ ಶೇ.22 ಕ್ಕೆ ಏರಿಕೆಯಾಗಲಿದ್ದು, ಇದು ಸರ್ಕಾರದ ಮಾರ್ಗಸೂಚಿಯ ಸ್ಪಷ್ಟ ಉಲ್ಲಂಘನೆಯಾಗಿದೆ. ಅತೀ ಸೂಕ್ಷ್ಮ ಪ್ರದೇಶವಾಗಿರುವ ಕರಾವಳಿಯಲ್ಲಿ ಇಷ್ಟೊಂದು ಪ್ರಮಾಣದ ಸಿಬ್ಬಂದಿ ಕೊರತೆ ಉಂಟಾದರೆ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ ಸಾಧ್ಯತೆಯಿದೆ. ಪ್ರಸ್ತುತ ಸಿ.ಇ.ಟಿ ಮಾದರಿಯ ನೇಮಕಾತಿಯಿಂದಾಗಿ ಶೇ.90 ರಷ್ಟು ಹೊರ ಜಿಲ್ಲೆಯವರು ಕರಾವಳಿಗೆ ನೇಮಕಗೊಳ್ಳುತ್ತಿದ್ದಾರೆ. ಇವರು 5-10 ವರ್ಷ ಸೇವೆ ಸಲ್ಲಿಸಿ ವರ್ಗಾವಣೆ ಪಡೆದು ಹೋಗುವುದರಿಂದ, ಕರಾವಳಿ ಜಿಲ್ಲೆಗಳು ಕೇವಲ 'ತರಬೇತಿ ಕೇಂದ್ರ'ಗಳಂತಾಗಿವೆ. ಸ್ಥಳೀಯ ಭಾಷೆ (ತುಳು, ಬ್ಯಾರಿ, ಕೊಂಕಣಿ) ಬಾರದ ಸಿಬ್ಬಂದಿಯಿಂದಾಗಿ ಗುಪ್ತಚರ ಮಾಹಿತಿ ಸಂಗ್ರಹಣೆ ಮತ್ತು ಜನಸ್ನೇಹಿ ಪೊಲೀಸ್ ವ್ಯವಸ್ಥೆಗೆ ಹಿನ್ನಡೆಯಾಗುತ್ತಿದೆ. ಆದುದರಿಂದ, ತಕ್ಷಣವೇ ಜಾರಿಗೆ ಬರುವಂತೆ ದಿನಾಂಕ 17-01-2026ರ ವರ್ಗಾವಣೆ ಆದೇಶವನ್ನು ತಡೆಹಿಡಿಯಬೇಕು ಮತ್ತು ಕರಾವಳಿ ಭಾಗಕ್ಕೆ ಸ್ಥಳೀಯ ಅಭ್ಯರ್ಥಿಗಳನ್ನೇ ನೇಮಕಾತಿ ಮಾಡಿಕೊಳ್ಳುವಂತೆ ನೇಮಕಾತಿ ನಿಯಮವನ್ನು ರೂಪಿಸುವಂತೆ ಕ್ರಮ ಕೈಗೊಳ್ಳುವಂತೆ ಮಾನ್ಯ ಗೃಹ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ರಾಜ್ಯ ಕರಾವಳಿ ಭಾಗದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಅತಿ ಸೂಕ್ಷ್ಮ ಪ್ರದೇಶಗಳಾಗಿದ್ದು, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಮಾನಸಿಕ ಮತ್ತು ದೈಹಿಕವಾಗಿ ಸದೃಡವಾಗಿರುವುದಲ್ಲದೆ ಸ್ಥಳೀಯರೊಂದಿಗೆ ಬೆರತು ಅಲ್ಲಿನ ಆಗುಹೋಗುಗಳ ಬಗ್ಗೆ ಮಾಹಿತಿ ಪಡೆದು ಕಾನೂನು ಸುವ್ಯವಸ್ಥೆ, ಅಪರಾಧ ಮತ್ತು ಸಂಚಾರ ನಿಯಂತ್ರಣ ನಿರ್ವಹಿಸಬೇಕಾಗಿರುತ್ತದೆ. ಅಲ್ಲದೇ ಸದರಿ ಸಿಬ್ಬಂದಿಗಳು ಇಲಾಖೆ ನಿಯಮಗಳನ್ವಯ ವೃತ್ತಿ ಜೀವನ ಜತೆಗೆ ಕೌಟುಂಬಿಕ ಜೀವನದಲ್ಲಿಯೂ ಸಹ ಸಮತೋಲನ ಕಾಯ್ದಿರಿಸಬೇಕಾಗುತ್ತದೆ.

ಪ್ರಸ್ತುತ ಅಂತರ ಜಿಲ್ಲಾ ವರ್ಗಾವಣೆ ಕುರಿತಂತೆ ಹೊರಡಿಸಿರುವ ನಿಯಮಗಳಲ್ಲಿ ನಿಗದಿಪಡಿಸಿರುವ ಷರತ್ತುಗಳನ್ವಯ ಸೇವಾ ಜೇಷ್ಠತೆ ಆಧಾರದ ಮೇಲೆ ವರ್ಗಾವಣೆಗೆ ಪರಿಗಣಿಸಲಾಗುತ್ತಿದ್ದು, ಸ್ವೀಕೃತವಾಗಿರುವ ವರ್ಗಾವಣೆ ಅರ್ಜಿಗಳಲ್ಲಿ ತಂದೆ ತಾಯಿ ಯೋಗಕ್ಷೇಮ, ಕುಟುಂಬದ ಜವಾಬ್ದಾರಿ ಹಾಗೂ ಇನ್ನಿತರ ಕೌಟುಂಬಿಕ ಕಾರಣಗಳಿಗೆ ಸೇವಾ ಜೇಷ್ಠತೆ ಬಿಟ್ಟು ಕೊಟ್ಟು ವರ್ಗಾವಣೆ ಹೋಗಲು ಬಯಸಿರುವುದಾಗಿರುತ್ತದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ಸಿಬ್ಬಂದಿಗಳು ಕೌಟುಂಬಿಕ ಸಮಸ್ಯೆಗಳ ಹಿನ್ನಲೆಯಲ್ಲಿ ಆರ್ಥಿಕ & ಮಾನಸಿಕ ಒತ್ತಡದ ಮೇಲೆ ಕೋಮು ಸೂಕ್ಷ್ಮತೆ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸಂಬಂಧಪಟ್ಟ ಘಟಕದ ಕರ್ತವ್ಯದ ಮೇಲೆ ಪರಿಣಾಮ ಉಂಟಾಗುತ್ತಿದೆ. ಅಲ್ಲದೇ ಅವರುಗಳು ಕೌಟುಂಬಿಕ ಕಾರಣಗಳ ಮೇಲೆ ನಿರಂತರವಾಗಿ ಅಂತರ್ ಜಿಲ್ಲಾ ವರ್ಗಾವಣೆಗಾಗಿ ಮುಂಬಡ್ತಿ ಪರಿತ್ಯಜನೆ ಸಹ ಮಾಡುತ್ತಿರುತ್ತಾರೆ. ಸದರಿ ಸಿಬ್ಬಂದಿಗಳ ಹಾಗೂ ಅವರ ಕುಟುಂಬದ ಯೋಗಕ್ಷೇಮದ ಜವಾಬ್ದಾರಿಯು ಸಹ ಇಲಾಖೆಗೆ ಇರುವುದರಿಂದ ಸೂಕ್ಷ್ಮ ಪ್ರದೇಶಗಳಲ್ಲಿ 10 ವರ್ಷ ಮೇಲ್ಪಟ್ಟು ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಮನವಿಗಳನ್ನು ಸೇವಾ ಜೇಷ್ಠತೆಯ ಆಧಾರದ ಮೇಲೆ ಪರಿಗಣಿಸಿ ಸರ್ಕಾರದ ಆದೇಶದಲ್ಲಿನ ಅಂಶಗಳಿಗೆ ಭಾಗಶಃ ವಿನಾಯಿತಿ ನೀಡಿ ಹೆಚ್ಚುವರಿಯಾಗಿ ಅಂತರ ಜಿಲ್ಲಾ ವರ್ಗಾವಣೆಗಳನ್ನು ಮಾಡಲಾಗಿರುತ್ತದೆ.

ಸದರಿ ದಕ್ಷಿಣ ಕನ್ನಡ ಮತ್ತು ಉಡುಪಿ ಘಟಕದ ಮಂಜೂರಾತಿ ಬಲ, ಹಾಲಿ ಬಲ, ವರ್ಗಾವಣೆಯಾದ ಸಿಬ್ಬಂದಿಗಳ ಸಂಖ್ಯೆ ಇತಯಾದಿ ವಿವರಗಳು ಈ ಕೆಳಗಿನಂತೆ ಇರುತ್ತದೆ.

| ಘಟಕ | ಮಂಜೂರಾತಿ ಬಲ | ಹಾಲಿ ಬಲ | ರಿಕ್ತ ಹುದ್ದೆ | ವರ್ಗಾವಣೆ ಮಾಡಲಾದ ಸಿಪಿಸಿಗಳ ಸಂಖ್ಯೆ | ವರ್ಗಾವಣೆಯ ಶೇಕಡವಾರು ಪ್ರಮಾಣ | ನೇಮಕಾತಿಗೆ ಅಧಿಸೂಚನೆ ಪರಿಗಣಿಸಲಾದ ಹುದ್ದೆಗಳ ಸಂಖ್ಯೆ | ಹಂಚಿಕೆ ಮಾಡಿರುವ ಗೃಹರಕ್ಷಕ ಸಿಬ್ಬಂದಿ |
|---|---|---|---|---|---|---|---|
| ಮಂಗಳೂರು ನಗರ | 801 | 687 | 114 | 63 | 22.09% | 125 | 72 |
| ದಕ್ಷಿಣ ಕನ್ನಡ ಜಿಲ್ಲೆ | 470 | 417 | 53 | 24 | 16.38% | 70 | 58 |
| ಉಡುಪಿ | 553 | 482 | 71 | 41 | 20.25% | 100 | 81 |

- ಪ್ರಸ್ತುತ ಸದರಿ ಸಿಬ್ಬಂದಿಗಳ ವರ್ಗಾವಣೆಯಿಂದ ರಿಕ್ತವಾಗುವ ಹುದ್ದೆಗಳನ್ನು ಗಮನದಲ್ಲಿ ಇಟ್ಟುಕೊಂಡು ಮೇಲೆ ಪ್ರಸ್ತಾಪಿಸಿರುವಂತೆ ಮಂಗಳೂರು ನಗರದ 114 ರಿಕ್ತಹುದ್ದೆಗಳ ಸ್ಥಳದಲ್ಲಿ 125 ಹುದ್ದೆಗಳಿಗೆ 9.64 % ರವರೆಗೆ, ದಕ್ಷಿಣ ಕನ್ನಡ ಜಿಲ್ಲೆ- 53 ರಿಕ್ತಹುದ್ದೆಗಳ ಸ್ಥಳದಲ್ಲಿ 70 ಹುದ್ದೆಗಳಿಗೆ -32.07% ಹಾಗೂ ಉಡುಪಿ ಜಿಲ್ಲೆ -71 ರಿಕ್ತಹುದ್ದೆಗಳ ಸ್ಥಳದಲ್ಲಿ 100 ಹುದ್ದೆಗಳಿಗೆ-40.8 % ರವರಗೆ ಹೆಚ್ಚುವರಿ ನೇಮಕಾತಿ ಅಧಿಸೂಚನೆಗಾಗಿ ಪರಿಗಣಿಸಲಾಗಿರುತ್ತದೆ.
- ಕರಾವಳಿ ಭಾಗದ ಜಿಲ್ಲೆಗಳಲ್ಲಿ ರಿಕ್ತವಿರುವ ಹುದ್ದೆಗಳಿಗೆ ಮೇಲೆ ಪ್ರಸ್ತಾಪಿಸಿರುವಂತೆ ಹೆಚ್ಚುವರಿಯಾಗಿ ಸ್ಥಳೀಯ ಗೃಹ ರಕ್ಷಕ ಸಿಬ್ಬಂದಿಗಳನ್ನು ಸಹ ಕಾನೂನು ಸುವ್ಯವಸ್ಥೆ ಮತ್ತು ಸಂಚಾರ ನಿಯಂತ್ರಣ ಕರ್ತವ್ಯಗಳಿಗಾಗಿ ನಿಯುಕ್ತಿಗೊಳಿಸಲಾಗಿದೆ.
- ಕಾನೂನು ಸುವ್ಯವಸ್ಥೆ ಹಿತದೃಷ್ಟಿಯಿಂದ ಮಂಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳೊಂಡಂತೆ ಮಂಗಳೂರು ಇಲ್ಲಿ ವಿಶೇಷ ಕಾರ್ಯ ಪಡೆಯನ್ನು ಸಹ ಸ್ಥಾಪಿಸಲಾಗಿರುತ್ತದೆ.
- ಸದರಿ ಸಿಬ್ಬಂದಿಗಳ ವರ್ಗಾವಣೆಯ ಪೂರ್ವದಲ್ಲಿ ಪ್ರಸ್ತಾಪಿಸಿರುವ ಆಡಳಿತಾತ್ಮಕ ಅಂಶಗಳು, ಅವರುಗಳ ಸೇವೆ ಮತ್ತು ಕೌಟುಂಬಿಕ ಸಮಸ್ಯೆಗಳನ್ನು ಪರಿಗಣನೆಗೆ ತೆಗೆದುಕೊಂಡು ಇಲಾಖೆಯ ಕಾನೂನು & ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಅಗತ್ಯ ಕ್ರಮಗಳು ಜಾರಿಯಲ್ಲಿರುವುದನ್ನು ಖಚಿತ ಪಡಿಸಿಕೊಂಡು ಮಾಡಲಾಗಿರುತ್ತದೆ.
- ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು (ವರ್ಗಾವಣೆಗೊಂಡ ಸಿಬ್ಬಂದಿಗಳ ಹೊರತುಪಡಿಸಿ) ಸ್ಥಳೀಯ ಭಾಷೆ ಬಲ್ಲವರಾಗಿದ್ದು, ಗುಪ್ತಚರ ಮಾಹಿತಿ ಸಂಗ್ರಹಣೆಯಲ್ಲಿ ಸಮರ್ಥರಿರುತ್ತಾರೆ

ಈ ಹಿನ್ನೆಲೆಯಲ್ಲಿ ದಿನಾಂಕ 17.01.2026 ರ ಆದೇಶದಲ್ಲಿನ ಸಿಬ್ಬಂದಿಗಳ ವರ್ಗಾವಣೆಯಿಂದ ಕರಾವಳಿ ಭಾಗದ ಜಿಲ್ಲೆಗಳ ಕಾನೂನು ಸುವ್ಯವಸ್ಥೆ ಗುಪ್ತಚರ ಮಾಹಿತಿ ಹಾಗೂ ಜನಸ್ನೇಹಿ ವ್ಯವಸ್ಥೆಗೆ ಯಾವುದೇ ಭಾದಕವಾಗುವುದಿಲ್ಲ.

**ಹೆಚ್‌ಡಿ 18 ಪಿಪಿಎಸ್ 2026**

**(ಡಾ : ಜಿ.ಪರಮೇಶ್ವರ)**
ಗೃಹ ಸಚಿವರು